ಸರಿಪಡಿಸಿಕೊಳ್ಳುವಂತೆ ಅಭಿಪ್ರಾಯ ಪಟ್ಟಿರುತ್ತದೆ. ಒಟ್ಟಾರೆ ಈ ಸಮಿತಿಯು ಕಾಮಗಾರಿ ನಿರ್ವಹಣೆಯಲ್ಲಿ ಹಣ ದುರುಪಯೋಗ ಆಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

ಇ) ವಿವರಗಳನ್ನು ಪಟ್ಟಿಯ ರೂಪದಲ್ಲಿ ಲಗತ್ತಿಸಲಾಗಿದೆ.

3510 (4552) ಶ್ರೀ ಆಲ್ಕೋಡ್ ಹನುಮಂತಪ್ಪ ವೈ. (ದೇವದುರ್ಗ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ,ದೇವದುರ್ಗ ತಾಲ್ಲೂಕಿಗೆ ಅಗ್ನಿ ಶಾಮಕ ಠಾಣೆ ಮಂಜೂರಾಗಿರುವುದು ನಿಜವೇ; ಹಾಗಿದ್ದಲ್ಲಿ ಇದಕ್ಕೆ ಮಂಜೂರಾದ ಹಣವೆಷ್ಟು (ವಿವರ ನೀಡುವುದು);

ಆ) ಸದರಿ ಅಗ್ನಿಶಾಮಕ ಠಾಣೆ ಮಂಜೂರಾಗಿದ್ದಲ್ಲಿ, ಕಟ್ಟಡ, ಸಿಬ್ಬಂದಿ ವರ್ಗ, ವಾಹನದ ವ್ಯವಸ್ಥೆ, ಸ್ಥಳ ನೀಡಲಾಗಿದೆಯೇ; ಇದಕ್ಕೆ ಬೇಕಾಗುವ ಹಣವನ್ನು ಮಂಜೂರು ಮಾಡಲಾಗಿದೆಯೇ; ಇದಕ್ಕೆ ಬೇಕಾಗುವ ಒಟ್ಟು ಹಣ ಎಷ್ಟು; ಬೇಕಾಗುವ ಪೂರ್ಣ ಹಣವನ್ನು ಸರ್ಕಾರ ಮಂಜೂರು ಮಾಡಲು ಕ್ರಮ ಕೈಗೊಂಡಿರುವುದೇ (ವಿವರ ನೀಡುವುದು) ;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)–

ಅ) ಹೌದು. ಸರ್ಕಾರವು ಆದೇಶ ಸಂಖ್ಯೆ : ಒಇ 142 ಕಅಸೇ 2004 ದಿನಾಂಕ: 16.5.2005 ರಲ್ಲಿ ಮಂಜೂರಾತಿ ನೀಡಿರುತ್ತದೆ. ಈ ಮಂಜೂರಾದ ಅಗ್ನಿ ಶಾಮಕ ಠಾಣೆಗೆ ಅನಾವರ್ತಕ ವೆಚ್ಚವಾಗಿ ರೂ 45,12,000 ಹಾಗೂ ಆವರ್ತಕ ವೆಚ್ಚವಾಗಿ 27,48,056 ಗಳು ಮಂಜೂರಾಗಿರುತ್ತದೆ.

ಆ) ಅಗ್ನಿಶಾಮಕ ಠಾಣೆ ಹಾಗೂ ಸಿಬ್ಬಂದಿಯ ವಸತಿ ಗೃಹ,ಕವಯತು ಮೈದಾನ ಇತ್ಯಾದಿ ಗಳಿಗೆ ಸುಮಾರು 2 ಎಕರೆನಿವೇಶನ ಅವಶ್ಯಕವಾಗಿ ಬೇಕಾಗಿರುತ್ತದೆ. ಈ ಬಗ್ಗೆ ಜಿಲ್ಲಾದಿಕಾರಿ ಮತ್ತು ತಹಶೀಲ್ದಾರ್‌ರವರಿಂದ ನಿವೇಶನ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

3511(4553) ಶ್ರೀ ಆಲ್ಕೋಡ್ ಹನುಮಂತಪ್ಪ. ವೈ (ದೇವದುರ್ಗ) – ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಡಿ.ಎಫ್ ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಪಟ್ಟಣ ಪಂಚಾಯತಿಗೆ ಕಳೆದ ಮೂರು ವರ್ಷಗಳಿಂದ ಯಾವ ಯಾವ